ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ.ಸಿ.ನಂಃ 1092/16**

ಪಿಡಬ್ಲ್ಯುಃ – 7

ಸಿಡಬ್ಲ್ಯುಃ – 13

ದಿನಾಂಕಃ 29.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಕರೀಂ ರಾವತರ್ |
| ತಂದೆಯ ಹೆಸರು | – ಎಂ ಅಬ್ಬಾಸ್ |
| ವಯಸ್ಸು | – 60 ವರ್ಷ |
| ವೃತ್ತಿ | – ನಿವೃತ್ತ ಪೊಲೀಸ್ ಉಪಾಧೀಕ್ಷಕರು |
| ವಾಸಸ್ಥಳ | – ಮೈಸೂರು |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ನಾನು ದಿಃ 08.08.2013 ರಿಂದ 30.07.2016ರವರೆಗೆ ಮಡಿಕೇರಿ ಗ್ರಾಮಾಂತರ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ07.04.2016 ರಂದು ನಾನು ಈ ಪ್ರಕರಣದ ಕಡತವನ್ನು ಚಾಸಾ–12 ರವರಿಂದ ಪಡೆದುಕೊಂಡು ಅಲ್ಲಿಯವರೆಗೂ ಅವರು ಮಾಡಿರುವ ತನಿಖೆಯ ಬಗ್ಗೆ ತಿಳಿದುಕೊಂಡಿರುತ್ತೇನೆ. ನಂತರ ಈ ಪ್ರಕರಣದ ಆರೋಪಿಗಳ ಪತ್ತೆಯ ಬಗ್ಗೆ ಸಿಬ್ಬಂದಿಯನ್ನು ನೇಮಿಸಿರುತ್ತೇನೆ. ದಿಃ05.05.2016ರಂದು ಈ ಪ್ರಕರಣದ ಆರೋಪಿಗಳಾದ ಸಿರಾಜುದ್ದೀನ್, ಹಮೀದ್, ಜಕ್ರಿಯಾ ಇವರುಗಳು ನ್ಯಾಯಾಲಯಕ್ಕೆ ಶರಣಾಗಿದ್ದು, ನಂತರ ನಾನು ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿ ದಿಃ 05.05.2016 ರಂದು ಮೇಲೆ ಹೇಳಿದ ಸದರಿ ಮೂರು ಜನ ಆರೋಪಿಗಳನ್ನು ಪೊಲೀಸ್ ಕಸ್ಟಡಿಗೆ ಪಡೆದುಕೊಂಡಿರುತ್ತೇನೆ. ಸದರಿ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿ ಅವರ ಸ್ವ ಇಚ್ಛಾ ಹೇಳಿಕೆಗಳನ್ನು

ಪಡೆದುಕೊಂಡಿರುತ್ತೇನೆ. ದಿಃ06.05.2016 ರಂದು ಆರೋಪಿಗಳು ನೀಡಿದ ಮಾಹಿತಿಯ ಮೇರೆಗೆ, ಆರೋಪಿಗಳು ನಮ್ಮನ್ನು ಬೆಂಗಳೂರಿನ ಹೆ ಎ ಎಲ್ ರಸ್ತೆಯ ಮಣಪುರಂ ಫೈನಾನ್ಸ್ ಶಾಖೆಗೆ ಕರೆದುಕೊಂಡು ಹೋಗಿ, ಆರೋಪಿಗಳು ಈ ಪ್ರಕರಣದಲ್ಲಿ ಕಳ್ಳತನ ಮಾಡಿದ್ದ ಚಿನ್ನಾಭರಣಗಳನ್ನು ಸದರಿ ಫೈನಾನ್ಸ್ ನಲ್ಲಿ ಅಡಮಾನದಲ್ಲಿ ಇಟ್ಟಿದ್ದನ್ನು ತಿಳಿಸಿದ್ದು, ಚಾಸಾ-8 ರವರು ಸದರಿ ಚಿನ್ನಾಭಾರಣಗಳನ್ನು ಹಾಜರು ಪಡಿಸಿದ ಮೇರೆಗೆ ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ವಶಕ್ಕೆ ಪಡೆದುಕೊಂಡು ಮಹಜರು ಕ್ರಮ ಜರುಗಿಸಿರುತ್ತೇನೆ. ಆ ರೀತಿ ವಶಪಡಿಸಿಕೊಂ ಚಿನ್ನಾಭಾರಣಗಳನ್ನು ಮಾಲು ಪಟ್ಟಿ ಸಂಖ್ಯೆ 35/2016 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಚಾಸಾ-8 ರವರ ಹೇಳಿಕೆಯನ್ನು ದಾಖಲು ಮಡಿಕೊಂಡಿರುತ್ತೇನೆ. ದಿಃ07.05.2016 ರಂದು ಆರೋಪಿಗಳು ನಮ್ಮನ್ನು ಕರೆದುಕೊಂಡು ಕೃತ್ಯ ಸ್ಥಳವಾದ ನಾಪೋಕ್ಲುವಿನ ಕಲ್ಲುಮೊಟ್ಟೆ ಗ್ರಾಮಕ್ಕೆ ತೆರಳಿ ಚಾಸಾ-1 ರವರ ಮನೆಯಲ್ಲಿ ಕಳ್ಳತನ ಮಾಡಿದ ಸ್ಥಳವನ್ನು ತೋರಿಸಿಕೊಟ್ಟಿದ್ದು, ಘಟನಾ ಸ್ಥಳದಲ್ಲಿ ನಾನು ಚಾಸಾ-6 ಮತ್ತು 7 ರವರ ಸಮಕ್ಷಮ ಸ್ಥಳ ಮಹಜರು ಮಾಡಿರುತ್ತೇನೆ. ನಂತರ ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಕಬ್ಬಿಣದ ರಾಡನ್ನು ಚಾಸಾ-1 ರವರ ಮನೆಯ ಮುಂಭಾಗದ ಬೇಲಿಯ ಬದಿಯಿಂದ ತೆಗೆದು ಹಾಜರು ಪಡಿಸಿದ್ದು, ಸದರಿ ಕಬ್ಬಿಣದ ರಾಡನ್ನು ಮಾಲುಪಟ್ಟಿ ಸಂಖ್ಯೆ 36/16 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ನಂತರ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ದಿಃ 25.07.2016 ರಂದು ಚಾಸಾ-1 ರವರು ನ್ಯಾಯಾಲಯದ ಆದೇಶ ಪಡೆದುಕೊಂಡು ಹಾಜರಾದ ಮೇರೆಗೆ ಚಿನ್ನಾಭರಣಗಳನ್ನು ಚಾಸಾ-1 ರವರಿಗೆ ಪಂಚರ ಸಮಕ್ಷಮ ಒಪ್ಪಿಸಿರುತ್ತೇನೆ. ಚಾಸಾ-9,10 ಹಾಗೂ ಚಾಸಾ-1 ರವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ. ನನಗೆ ವರ್ಗಾವಣೆ ಆದ ಕಾರಣ, ಮುಂದಿನ ತನಿಖೆಗೆಂದು ಈ ಪ್ರಕರಣದ ಕಡತವನ್ನು ಚಾಸಾ-14 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ನ್ಯಾಯಾಲಯದ ಮುಂದಿರುವ 3ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 1 ಮತ್ತು 2 ನೇ ಆರೊಪಿತರು ಈ ದಿನ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಇ ಪಿ ಅರ್ಜಿ ಹಾಕಿದ್ದು, ಸದರಿ ಆರೋಪಿತರನ್ನು ಗುರುತಿಸಲು ತಕರಾರು ಇಲ್ಲ ಎನ್ನುತ್ತಾರೆ.

ಸಾಕ್ಷಿಗೆ ಮೂರು ದಾಖಲೆಗಳನ್ನು ತೋರಿಸಲಾಗಿದ್ದು, ಅದು ಆರೋಪಿ-1 ರಿಂದ 3 ರವರ ಸ್ವ ಇಚ್ಛಾ ಹೇಳಿಕೆಯಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅವುಗಳನ್ನು ಕ್ರಮವಾಗಿ ನಿಪಿ-7 ರಿಂದ 9 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದಿಃ 06.05.2016 ರ ಅಮಾನತ್ತು ಮಹಜರಾಗಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ, ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಅದನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದಿಃ 07.05.2016 ರ ಸ್ಥಳ ಮತ್ತು ಅಮಾನತ್ತು ಮಹಜರಾಗಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ, ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಅದನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಕಬ್ಬಿಣದ ರಾಡನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು. ಮಾ. 2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ – ಆರೋಪಿತರ ಪರ ವಕೀಲರಾದ ಶ್ರೀ. ಎಸ್ ಎ ಎಸ್ ರವರಿಂದಃ-

ಚಾಸಾ-1 ರವರ ನೀಡಿದ್ದ ದೂರನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಚಾಸಾ-1 ರವರು 6 ದಿನಗಳು ತಡವಾಗಿ ದೂರು ನೀಡಿದ್ದಾರೆ ಎಂದರೆ ಸರಿ. ದಿಃ 06.05.2016 ರಂದು ಚಾಸಾ-4 ಮತ್ತು 5 ರವರ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-8 ರವರ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ 1 ರಿಂದ 3 ರವರು ನಿಪಿ-7 ರಿಂದ 9 ರಂತೆ ಸ್ವ ಇಚ್ಛಾ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ದಿಃ 07.05.2016 ರಂದು ನಾನು ಕೃತ್ಯ ಸ್ಥಳಕ್ಕೆ ಹೋಗಿಲ್ಲ, ಚಾಸಾ-6 ಮತ್ತು 7 ರವರ ಸಮಕ್ಷಮ ನಿಪಿ-11 ರಂತೆ ಸ್ಥಳ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ಮು. ಮಾ. 2 ಕಬ್ಬಿಣದ ರಾಡನ್ನು ನಾನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು. ಮಾ. 2 ಕ್ಕೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮು. ಮಾ. 2 ರಂತೆ ಕಬ್ಬಿಣದ ರಾಡು ಸಾಮಾನ್ಯವಾಗಿ ಎಲ್ಲಾ ಕಡೆ ದೊರೆಯುತ್ತದೆ ಎಂದರೆ ಸರಿಯಲ್ಲ. ಮು. ಮಾ. 2 ಕಬ್ಬಿಣದ ರಾಡನ್ನು ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿದ್ದು ಎಂದು ಹೇಳಲು

ಯಾವುದೇ ವಿಶೇಷ ಗುರುತುಗಳು, ಪ್ರಕರಣದ ವಿವರ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಮು. ಮಾ. 2 ಯಾವ ಬಣ್ಣದಲ್ಲಿ ಇದೆ ಎಂದು ನಿಪಿ-11 ರಲ್ಲಿ ಹೇಳಿಲ್ಲ ಎಂದರೆ ಸರಿ. ಚಾಸಾ-9 ಮತ್ತು 10 ರವರ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ಮುತ್ತೂಟ್ ಫೈನಾನ್ಸ್ ನವರು ನೀಡಿರುವ ವರದಿಯ ಪ್ರಕಾರ 4ನೇ ಆರೋಪಿಯಾದ ರಮೇಶ್ ರವರು ಸದರಿ ಫೈನಾನ್ಸ್ ನಲ್ಲಿ ಅಡಮಾನ ಇಟ್ಟಿರುತ್ತಾರೆ ಎಂದು ನಮೂದು ಇದೆ ಎಂದರೆ ಸರಿ. ಆರೋಪಿ 1 ರಿಂದ 3 ರವರಿಗೂ 4ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಆರೋಪಿ 1 ರಿಂದ 3 ರವರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.